ಅ) ಒಂದು ಅಧಿಕ ಡಿಪೋ

ಆ) ಕರ್ನಾಟಕ ಇಂಡ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಲೇಔಟ್.

ಇ) 60 ಲಕ್ಷ ರೂ. ಗಳ ವೆಚ್ಚದ ಅಂದಾಜು ಮಾಡಲಾಗಿದೆ.

ಸೂಪಾ ತಾಲ್ಲೂಕಿನಲ್ಲಿ ಕರ್ನಾಟಕ ವಿದ್ಯುತ್ ಮಂಡಲಿಯ ಉಪವಿಭಾಗ ಪ್ರಾರಂಭ.

3448 - ಶ್ರೀ ಪ್ರಭಾಕರ್ ಎನ್. ರಾಣೆ.(ಕಾರವಾರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೂಪಾ ತಾಲ್ಲೂಕಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪವಿಬಾಗಕ್ಕೆ ತಾಲ್ಲೂಕು ವಿದ್ಯುತ್ ಪೂರೈಕೆ ಅಸ್ತವ್ಯಸ್ತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ತಿಂಗಳುಗಟ್ಟಲೆ ಹಾಗೂ ಕೆಲವು ಹಳ್ಳಿಗಳಲ್ಲಿ ವರ್ಷಗಟ್ಟಲೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿರುವುದರಿಂದ ಜನರಿಗ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕಾಳಿ ಜಲ ವಿದ್ಯುತ್ ಯೋಜನೆಯಿಂದ ರಾಜ್ಯಕ್ಕೆ ವಿದ್ಯುತ್ ನೀಡಲು ತನ್ನ ಸರ್ವಸ್ವವನ್ನು ತ್ಯಾಗ ಮಾಡಿದ ಸೂಪಾ ತಾಲ್ಲೂಕಿನ ಜನರಿಗೆ ವ್ಯವಸ್ಥಿತವಾದದ ರೀತಿಯಲ್ಲಿ ವಿದ್ಯುತ್ ಪೂರೈಕೆ ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪ ವಿಭಾಗವನ್ನು ಪ್ರಾರಂಭಿಸುವುದು ಅವಶ್ಯವೆಂದು ಸರ್ಕಾರ ಭಾವಿಸುವುದಿಲ್ಲವೇ?

ಈ) ಹಾಗಿದ್ದರೆ ಸೂಪಾ ತಾಲ್ಲೂಕಿನ ಕೇಂದ್ರ ಸ್ಥಳವಾದ ಜೊಯಡಾದಲ್ಲಿ ವಿದ್ಯುತ್ ಮಂಡಳಿಯ ಉಪವಿಭಾಗವನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು)

ಅ) ವಿದ್ಯುತ್ ಪೂರಕೈಯು ಅಸ್ತವ್ಯಸ್ಥಗೊಂಡಿರುವ ಬಗ್ಗೆ ಯಾವ ದೂರುಗಳು ಗಮನಕ್ಕೆ ಬಂದಿಲ್ಲ ಹಾಲಿ ದಾಂಡೇಲಿಯಲ್ಲಿರುರ ಕ.ವಿ.ಮಂಡಳಿಯ ಉಪ ವಿಭಾಗವು ಸೂಪಾ ತಾಲ್ಲೂಕಿಲ್ಲಿ ವಿದ್ಯುಚ್ಛಕ್ತಿ ಸರಬರಾಜು ಸುಗಮವಾಗಿರುವಂತೆ ಮೇಲ್ವಿಚಾರಣೆ ನಡೆಸುತ್ತಿದೆ.

ಆ) ವಿದ್ಯುತ್ ಪೂರೈಕೆಸ್ಥಗಿತಗೊಂಡಿರುವ ಬಗ್ಗೆ ಯಾವುದೇ ಮಾಹಿತಿಯು ಮಂಡಳಿಗೆ ಬಂದಿರುವುದಿಲ್ಲ.

ಇ) ಸೂಪಾದಲ್ಲಿ ತಾಲ್ಲೂಕಿನ ಹಾಲಿಕೇಂದ್ರ ಸ್ಥಳವಾದ ಜೊಯದಾದಲ್ಲಿ ಒಂದು ಶಾಖಾ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ) ಸೂಪಾ ತಾಲ್ಲೂಕಿನಲ್ಲಿ ವಿದ್ಯುತ್ ಪೂರೈಕೆಯು ಸುಗಮವಾಗಿಸಲು ತಾಲ್ಲೂಕಿನ ಕೇಂದ್ರ ಸ್ಥಳವಾದ ಜೊತೆದಾದರಲ್ಲಿ ಶಾಖಾ ಕಛೇರಿಯನ್ನು ತೆರೆಯುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕಪ್ಪು ಹಲಗೆ ಯೋಜನೆಯಡಿಯಲ್ಲಿ ನಿರ್ಮಿಸಲಿರುವ ಕೊಠಡಿಗಳ ಸಂಖ್ಯೆ.

3354 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಪ್ಪುಹಲಗೆ ಯೋಜನೆಯಡಿಯಲ್ಲಿ ಎಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ.

ಅ) ಇದುವರೆವಿಗೂ ಎಷ್ಟು ಕಟ್ಟಡಗಳು ಪೂರ್ಣವಾಗಿ ಶಾಲೆಯ ವಶಕ್ಕೆ ಬಂದಿದೆ?

ಇ) ಖಾಲಿ ಇರುವ ಶಿಕ್ಷಕರ ಹುದ್ದೆಗಳಲ್ಲಿ ಇದುವರೆವಿಗೂ ಭರ್ತಿ ಮಾಡಲಾದ ಹುದ್ದೆಗಳೇಷ್ಟು?

ಆ) ಕಪ್ಪು ಹಲಗೆ ಯೋಜನೆಯಡಿಯಲ್ಲಿ ಈ ಕೆಳಕಂಡ ಶಾಲಾ ಕೊಠಡಿಗಳನ್ನು ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆ.

ಹಂತ	ಮಂಜೂರಾದ ಶಾಲಾ ಕೊಠಡಿಗಳು.
1ನೇ ಹಂತ (87-88)	2,260
2ನೇ ಹಂತ (88-89)	6,094
3ನೇ ಹಂತ (89-90)	3,438
4ನೇ ಹಂತ (90-91)	6,761
ಒಟ್ಟು	18,553

ಆ) ಇದುವರೆವಿಗೂ ಪೂರ್ಣಗೊಂಡು ಶಿಕ್ಷಣ ಇಲಾಖೆಯ ವಶಕ್ಕೆಬಂದಿರುವ ಶಾಲಾ ಕೊಠಡಿಗಳ ಸಂಖ್ಯೆ

1ನೇ ಹಂತ	-1,643
2ನೇ ಹಂತ	-2,654
3ನೇ ಹಂತ	-915
ಒಟ್ಟು	5,212

ಇ) ಈ ಯೋಜನೆಯಡಿಯಲ್ಲಿ ಸೃಡಿಸಲಾದ ಮತ್ತು ಭರ್ತಿ ಮಾಡಲಾದ ಶಿಕ್ಷಕರ ಹುದ್ದೆಗಳ ವಿವಗಳು,

	ಸೃಜಿಸಲಾದ ಹುದ್ದೆಗಳು	ಭರ್ತಿಮಾಡಲಾದ ಹುದ್ದೆಗಳು
1ನೇ ಹಂತ	1611	1611
2ನೇಹಂತ	5003	5003
3ನೇ ಹಂತ	2712	
4ನೇ ಹಂತ	4597	6614
ಒಟ್ಟು	13,923	6614

ಹಾಸನದಿಂದ ಬೊಂಬಾಯಿಗೆ ಬಸ್ಸು ಓಡಿಸುವುದು.

3427 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಸಿಟಿಯಿಂದ ಬೊಂಬಾಯಿಗೆ ಒಂದು ಲಕ್ಷುರಿ ಬಸ್ಸನ್ನು ಓಡಿಸಲು ಕೆ.ಎಸ್.ಆರ್.ಟಿ.ಸಿಯವರು ಕಾರ್ಯಕ್ರಮ ಹಾಕಿಕೊಂಡಿರುವುದು ನಿಜವೇ?

ಆ) ಹಾಗಿದಲ್ಲಿ ಈ ಬಸ್ಸನ್ ಯಾವ ತಾರೀಖಿನಿಂದ ಓಡಿಸಲಾಗುವುದು.

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಶ್ರವಣಬೆಳಿಗೊಳದಿಂದ ಬೊಂಬಾಯಿಗೆ ಮತ್ತು ಒಂದಕ್ಕೆ ಸಾರಿಗೆ ಸೌಲಭ್ಯವನ್ನು ಪ್ರಾರಂಭಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.